

# ಧರ್ಮಶಾಲೆ

ಚಿತ್ರ: ಭಾವು ಪತ್ತಾರ್

ಬಲ್ಖ ಬುಖಾರಾ ಎಂಬ ಪ್ರಾಂತದಲ್ಲಿ ಇಬ್ರಾಹಿಂ ಎಂಬ ಬಾದಷಹನು ರಾಜ್ಯವಾಳುತ್ತಿದ್ದನು. ಒಂದು ದಿನ ಅವನ ಅರಮನೆಯ ಮಹಾದ್ವಾರದ ಬಳಿ ಒಬ್ಬ ಫಕೀರನು ಬಂದು ತಾನು ಒಳಗೆ ಹೋಗಬೇಕೆಂದು ಹೇಳಿದನು. ಅರಮನೆಯ ದ್ವಾರಪಾಲಕನು ಅವನನ್ನು ತಡೆದು 'ನೀನು ಒಳಗೆ ಹೋಗುವಂತಿಲ್ಲ ಇದು ನಮ್ಮ ಬಾದಷಹರ ಅರಮನೆ' ಎಂದು ದ್ವಾರಪಾಲಕನು ಹೇಳಿದನು.

ದ್ವಾರಪಾಲಕನ ಮಾತನ್ನು ಕೇಳಿ ಗಹಗಹಿಸಿ ನಕ್ಕ ಫಕೀರನು 'ಎಂಥ ಅರಮನೆ! ಇದು ಅರಮನೆಯಲ್ಲ ಧರ್ಮಶಾಲೆ. ನಾನು ಒಂದು ರಾತ್ರಿ ಇಲ್ಲಿ ವಿಶ್ರಾಂತಿ ಪಡೆಯಬಯಸುತ್ತೇನೆ' ಎಂದು ಹೇಳಿದನು.

ಅವನ ಮಾತನ್ನು ಕೇಳಿ ದ್ವಾರಪಾಲಕನು 'ನೀನೊಬ್ಬ ಹುಚ್ಚ ಇದು ಧರ್ಮಶಾಲೆಯಲ್ಲ ಅರಮನೆ. ಇದಕ್ಕೆ ನಿನ್ನಂಥವರಿಗೆ ಪ್ರವೇಶವಿಲ್ಲ' ಎಂದು ಹೇಳಿದನು.

ಆದರೆ ತಾನು ಅರಮನೆಯನ್ನು ಪ್ರವೇಶಿಸಲೇಬೇಕು ಎಂದು ಫಕೀರನು ಹಟಹಿಡಿದನು. ಆಗ ಹೊರಬಂದ ಬಾದಷಹ ಫಕೀರ ಹಾಗೂ ದ್ವಾರಪಾಲಕನ ಸಂಭಾಷಣೆಯನ್ನು ಕೇಳಿಸಿಕೊಂಡನು. ಅವನು ಆ ಫಕೀರನನ್ನು ಒಳಗೆ ಬಿಡುವಂತೆ ದ್ವಾರಪಾಲಕನಿಗೆ ಆದೇಶಿಸಿದನು.

ಫಕೀರನು ಒಳಗೆ ಬಂದ ನಂತರ ಬಾದಷಹನು ಅವನನ್ನು ಕುರಿತು 'ಇದು ನನ್ನ ಅರಮನೆ ಇದನ್ನು ನೀನು ಧರ್ಮಶಾಲೆ ಎಂದು ಏಕೆ ಹೇಳುತ್ತಿರುವೆ?' ಎಂದು ಕೇಳಿದನು. ಅದಕ್ಕೆ ಫಕೀರನು 'ನಾನು ಪ್ರಥಮ ಬಾರಿ ನಿಮ್ಮನ್ನು ಇಲ್ಲಿ ಕಾಣುತ್ತಿರುವೆ. ಐದು ವರ್ಷಗಳ ಹಿಂದೆಯೂ ನಾನು ಇಲ್ಲಿಗೆ ಬಂದಿದ್ದೆ. ಆಗ ಈ ಅರಮನೆಯ ಸಿಂಹಾಸನದ ಮೇಲೆ ಇನ್ನಾರೋ ಕುಳಿತಿದ್ದರು. ಅವರು ಕೂಡ ನಿನ್ನಂತೆಯೇ ಇದು ನನ್ನ ರಾಜಭವನ ಎಂದು ಹೇಳುತ್ತಿದ್ದರು'. ಎಂದನು.

'ಅವರು ನನ್ನ ತಂದೆ ಅವರು ಸ್ವರ್ಗಸ್ಥರಾದ ಮೇಲೆ ನಾನು ಸಿಂಹಾಸನದ ಮೇಲೆ ಕುಳಿತಿದ್ದೇನೆ. ಆದ್ದರಿಂದ ಈಗ ಇದು ನನ್ನ ಅರಮನೆ' ಬಾದಷಹ ಹೇಳಿದನು.

ಆಗ ಫಕೀರನು 'ಇಪ್ಪತ್ತು ವರ್ಷಗಳ ಹಿಂದೆಯೂ ನಾನು ಇಲ್ಲಿಗೆ ಬಂದಿದ್ದೆ. ಆಗ ವೃದ್ಧನೊಬ್ಬ ಈ ಅರಮನೆಯಲ್ಲಿ ಇದ್ದ. ಅವನು ಕೂಡ ಇದು ನನ್ನ ಅರಮನೆ ಎಂದು ಹೇಳುತ್ತಿದ್ದ' ಎಂದನು.

'ಅವರು ನನ್ನ ಅಜ್ಜ. ಆಗ ಅವರು ಈ ರಾಜ್ಯದ ರಾಜರಾಗಿದ್ದರು. ಆದ್ದರಿಂದಲೇ ಅವರು ಅರಮನೆಯ ಒಡೆಯರೂ ಆಗಿದ್ದರು'. ಬಾದಷಹ ಹೇಳಿದ.

ಫಕೀರ 'ಒಂದು ವೇಳೆ 20 ವರ್ಷಗಳ ನಂತರ ನಾನು ಇಲ್ಲಿಗೆ ಬಂದರೆ ಆಗಲೂ ನೀವು ಇಲ್ಲೇ ಇರುವಿರಾ?' ಎಂದ. 'ಗೊತ್ತಿಲ್ಲ. ಒಂದು ವೇಳೆ ಆಗ ನಾನು ಬದುಕಿದ್ದರೆ ಇಲ್ಲೇ ಇರುವೆ. ಇಲ್ಲವಾದರೆ ನನ್ನ ಮಗ ಇರುತ್ತಾನೆ'. ಬಾದಷಹ ಹೇಳಿದ.

ಆಗ ಫಕೀರ 'ಯಾವ ಸ್ಥಳದಲ್ಲಿ ಜನರು ಬಂದು ಹೋಗುತ್ತಾ ಇರುತ್ತಾರೋ ಅದಕ್ಕೆ ಧರ್ಮಶಾಲೆ ತಾನೆ ಅನ್ನೋದು? ಈ ಅರಮನೆಯಲ್ಲಿ ಕೆಲವು ದಿನ ನಿಮ್ಮ ಅಜ್ಜ ಇದ್ದು ಹೋದರು. ಆಮೇಲೆ ನಿಮ್ಮ ತಂದೆ, ಆ ಮೇಲೆ ನೀವು, ನಿಮ್ಮ ನಂತರ ನಿಮ್ಮ ಮಗ. ಹೀಗಾಗಿ ನೀವಾರು ಈ ಅರಮನೆಗೆ ಶಾಶ್ವತ ಒಡೆಯರಲ್ಲ. ಆದ್ದರಿಂದ ಇದು ನಿಮ್ಮ ಅರಮನೆ ಹೇಗಾಗುತ್ತದೆ. ಇದು ನೀವು ಕೆಲವು ದಿನ ಇದ್ದು ಹೋಗುವ ಸ್ಥಳವಾದುದರಿಂದ ಇದನ್ನು ನಾನು ಧರ್ಮಶಾಲೆ ಎಂದು ಹೇಳಿದ್ದು. ಈ ಜಗತ್ತೇ ಒಂದು ಧರ್ಮಶಾಲೆ ನಾವೆಲ್ಲ ಇಲ್ಲಿ ತಂಗಲು ಬಂದಿರುವ ಪ್ರಯಾಣಿಕರು' ಎಂದು ಹೇಳಿದ.

■ ಮುರಲೀಧರ ಕುಲಕರ್ಣಿ